**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬೇಲೂರು**

**ಎಮ್.ವಿ.ಸಿ. ನಂ. 1277/2022**

| | | |
|---|---|---|
| ಸಾಕ್ಷಿದಾರರ ಹೆಸರು : | ಮಹಿಮಾ ಕೆ ಪಿ | ಪ್ರಮಾಣ ವಚನ ಬೋಧಿಸಿದ |
| ತಂದೆ ಹೆಸರು : | ಪರಶಿವಮೂರ್ತಿ | ದಿನಾಂಕ: 09-01-2026 |
| ವಯಸ್ಸು : | 25 ವರ್ಷ | RW-1 |
| ಉದ್ಯೋಗ : | ಕ್ಲೇಮ್ಸ್ ಮ್ಯಾನೇಜರ್ , | |
| ವಾಸ ಸ್ಥಳ : | ಬೆಂಗಳೂರು | |

**ಮುಖ್ಯ ವಿಚಾರಣೆ : ಶ್ರೀ.ಯು ಎಂ ಸಿ .,ವಕೀಲರಿಂದ 3ನೇ ಎದುರುದಾರರ ಪರವಾಗಿ :-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಚಾರಗಳು ಸತ್ಯ ಇರುತ್ಯದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

1) ಆಥರೈಸೇಶನ್ ಲೆಟರ್ ನ್ನು ಹಾಜರುಪಡಿಸಿದ್ದು ಅದನ್ನು ನಿಆರ್-01 ಎಂದು ಗುರುತಿಸಲಾಯಿತು. ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-02 ಎಂದು ಗುರುತಿಸಲಾಯಿತು.

**ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.**

**ಪಾಟೀ ಸವಾಲು:ಶ್ರೀ ಸಿ ಎಂ ಪಿ .,ವಕೀಲರಿಂದ ಅರ್ಜಿದಾರರ ಪರವಾಗಿ:**

**2)** ಅಶೋಕ ಲೇಲ್ಯಾಂಡ್ ಲಾರಿ ಸಂ. ಕೆ ಎ 13 ಬಿ 9602 ಗೆ ಅಪಘಾತವಾದ ಸಮಯದಲ್ಲ ವಿಮಾ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಅಪಘಾತವಾದ ದಿನ ಲಾರಿ ಚಾಲನೆ ಮಾಡುತ್ತಿದ್ದ ಚಾಲಕನಿಗೆ ಡಿ ಎಲ್ ಚಾಲ್ತಿಯಲ್ಲಿತ್ತು ಎಂದರೆ ಸರಿ. ದೋ.ಪಟ್ಟಿಯನ್ನು ಪರಶೀಲಿಸಿರುತ್ತೇನೆ ಎಂದರೆ ಸರಿ. ವಿಮೆಯು ವಾಹನ ಚಾಲಕ ಮತ್ತು ಸರಕನ್ನು ತೆಗೆದುಕೊಂಡು ಹೋಗುವ ಮಾಲೀಕರಿಗೆ ಅನ್ವಯಿಸುತ್ತದೆ ಎಂದರೆ ಸರಿ.

3) ವಾಹನದಲ್ಲಿ ಎಷ್ಟು ಜನ ಸರಕನ್ನು ತೆಗೆದುಕೊಂಡು ಹೋಗುತ್ತಿದ್ದರು ಮತ್ತು ಎಷ್ಟು ಜನ ಮಾಲೀಕರು ಇದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಯಾವುದೇ ಸರಕು ಇರಲಿಲ್ಲ, ಚಾಲಕನನ್ನು ಬಿಟ್ಟು 4 ಜನ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಸ್ಥಳ ಮಹಜರ್ ನ್ನು ಓದಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಅಲ್ಲಿ ಸುಳ್ಳು ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

4) ಸಾಕ್ಷಿಗೆ ಪೋಟೋವನ್ನು ತೋರಿಸಿ ಅದರಲ್ಲಿ ತರಕಾರಿ ಕ್ರೇಟ್ ಮತ್ತು ಚೀಲಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಾಣುತ್ತದೆ ಎಂದು ಸೂಚಿಸಲಾಗಿ ಸಾಕ್ಷಿ ಅದು ಬೇರೆ ಪೋಟೋಗಳು ಎಂದು ನುಡಿಯುತ್ತಾರೆ. ಸಾಕ್ಷಿ ಗುರುತಿಸಿದ ಪೋಟೋವನ್ನು ನಿಪಿ 53 ಎಂದು ಗುರುತಲಾಯಿತು. ಮೃತ ಜಯಣ್ಣ ಮತ್ತು ಮೃತ ಮಂಜು ಇಬ್ಬರೂ ವಾಹನದಲ್ಲಿ ಸರಕನ್ನು ಮಾಲೀಕರಾಗಿ ಸರಕನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಮೃತರಿಬ್ಬರೂ ಸರಕಿನ ಮಾಲೀಕರಾಗಿ ಹೋಗುತ್ತಿದ್ದರೂ ವಿನಃ ಪ್ರಯಾಣಿಕರಾಗಿ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂಬ ದುರುದ್ದೇಶದಿಂದ ಸರಕಿನ ಮಾಲೀಕರಲ್ಲ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರತಿಪಾದನೆ ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ.,ಬೇಲೂರು.